ನಾನು ಅವನ ಬಗ್ಗೆ ಕೇಳಿದ್ದೇ ಅವನಿಗೆ ಇಷ್ಟವಾಗಲಿಲ್ಲ ಎಂದು ನನಗೆ ಅನ್ನಿಸಿತು.

ರೆಸ್ಟೋರೆಂಟ್‌ನಿಂದ ಹೊರಕ್ಕೆ ಬಂದ ನಾನು ಅವನ ವಿಷಯವನ್ನು ಅಣ್ಣಾಚ್ಚಿಯ ಹತ್ತಿರ ವಿಚಾರಿಸಿದೆ. ಅಣ್ಣಾಚ್ಚಿ ಎಂದರೆ ಆ ರೆಸ್ಟೋರೆಂಟಿನ ಮುಂದುಗಡೆ ದಿನಪತ್ರಿಕೆ, ಮಾಸಪತ್ರಿಕೆ, ವಾರಪತ್ರಿಕೆಗಳು, ಬೀಡಿ, ಸಿಗರೇಟ್, ಹಣ್ಣುಗಳು, ನಿಂಬೆ ಹಣ್ಣಿನ ಜ್ಯೂಸ್ ಮಾರುವವನು.

ಆ ಅಣ್ಣಾಚ್ಚಿಯ ಪರಿಚಯ ನನಗೆ ಬಹು ದಿವಸಗಳಿಂದ ಇತ್ತು. ಒಬ್ಬ ವಿದ್ಯಾರ್ಥಿಯಾಗಿದ್ದಾಗಿನಿಂದ ಸ್ವಾತಂತ್ರ್ಯ ಹೋರಾಟದೊಂದಿಗೆ ಸಂಬಂಧವಿದ್ದ ನಮ್ಮಂತಹ ಅನೇಕರಿಗೆ ಅವನ ಅಂಗಡಿಯು ಒಂದು ಅಭಯ ಕೇಂದ್ರವಾಗಿತ್ತು.

**ಇದ್ದಕ್ಕಿದ್ದಂತೆ ಮಳೆ ಶುರುವಾಯಿತು. ನನ್ನ ಕೈಯಲ್ಲಿ ಕೊಡೆ ಇರಲಿಲ್ಲ. ಮಳೆ ನಿಲ್ಲಲೆಂದು ಬಸ್‌ಸ್ಟ್ಯಾಂಡಿನ ಮುಂದಿದ್ದ ಮುಚ್ಚಿದ್ದ ಒಂದು ಅಂಗಡಿಯ ಜಗುಲಿಯಲ್ಲಿ ಹೋಗಿ ಕುಳಿತೆ. ಅಲ್ಲಿ ಬೆಳಕಿರಲಿಲ್ಲ. ದೀಪದ ಕಂಬದ ಬೆಳಕು ಮಧ್ಯೆ ಮಧ್ಯೆ ಆರುತ್ತಿತ್ತು. ಹತ್ತಿಕೊಳ್ಳುತ್ತಿತ್ತು. ಅದೇ ಜಗುಲಿಯ ಮೇಲೆ ಯಾರೋ ಇಬ್ಬರು ಗಂಡಸರು ಕುಳಿತಿದ್ದರು.**

ನನ್ನ ಪ್ರಶ್ನೆ ಕೇಳಿದ ಅಣ್ಣಾಚ್ಚಿ ಬಹಳ ಸಂತೋಷದಿಂದ ಉತ್ತರಿಸಿದನು:

'ಅವನು ಆ ಸಿನಿಮಾದಲ್ಲಿ ನಟಿಸಿದ್ದವನೇ, ಸಾರ್. ಹೆಸರು ಕುಮಾರ್ ಅಂತ...'

ಆಮೇಲೆ ಅಣ್ಣಾಚ್ಚಿಯೇ ನನ್ನನ್ನು ಕೇಳಿದನು,

'ಸಾರ್, ಆ ಚಿತ್ರದಲ್ಲಿ ಅವನ ನಟನೆ ನಿಮಗೆ ಇಷ್ಟವಾಯಿತೇ?'

ನಾನು ಹೌದೆಂದಾಗ ಅಣ್ಣಾಚ್ಚಿಗೆ ಆವೇಶವೇರಿತು.

'ಸಾರ್ ಅವನು ಅದೃಷ್ಟವಂತ. ಅದು ಅವನ ಮೊದಲ ಚಿತ್ರ. ಅವನು ಭವಿಷ್ಯದಲ್ಲಿ ಏನಾಗುತ್ತದೆಂದು ನೋಡುತ್ತಿರಿ. ಅವನು ಎಲ್ಲರ ಎಂಜಲು ತಟ್ಟೆಗಳನ್ನು ತೊಳೆಯುವವನಾಗುವುದಿಲ್ಲ. ಅವನು ಬಲು ದೊಡ್ಡ ಮನುಷ್ಯನಾಗುತ್ತಾನೆ. ನಮ್ಮ ಎಂ.ಜಿ.ಆರ್., ಶಿವಾಜಿಯಂತೆ...'

ಆ ದೃಶ್ಯವನ್ನು ತನ್ನ ಕಣ್ಣ ಮುಂದೆ ಕಾಣುತ್ತಿರುವಂತೆ ಅಣ್ಣಾಚ್ಚಿ ಸಂತೃಪ್ತಿಯಿಂದ ನಿಂತನು.

ಆಗ ನಾನು ರೆಸ್ಟೋರೆಂಟ್‌ನಲ್ಲಿ ನನಗುಂಟಾದ ಅನುಭವದ ಬಗ್ಗೆ ಹೇಳಿದೆನು.

ಅಣ್ಣಾಚ್ಚಿಗೆ ಅದನ್ನು ಕೇಳಿದಾಗ ಕೋಪ ಉಕ್ಕೇರಿತು.

'ಸಾರ್, ಇಲ್ಲದಿದ್ದರೂ ಆ ಪೋಟ್ಟಿ ಒಬ್ಬ ಕಪಟಿ. ಆ ಹುಡುಗನು ಸಿನಿಮಾದಲ್ಲಿ ಅಭಿನಯಿಸಿ ದೊಡ್ಡವನಾಗುವುದು ಅವನಿಗೆ ಸಹಿಸಲಾಗಿಲ್ಲ. ಅವನು ಇಲ್ಲಿ ಕೆಲಸವೇ ಮಾಡುವುದಿಲ್ಲ. ಜನರೊಂದಿಗೆ ಮಾತನಾಡುತ್ತಾ ಕಾಲ ಕಳೆಯುತ್ತಿರುತ್ತಾನೆ ಅಂತೆಲ್ಲಾ ಹೇಳುತ್ತಿರುತ್ತಾನೆ. ಅವನು ಸಿನಿಮಾದಲ್ಲಿ ಅಭಿನಯಿಸಿದ್ದೇನೆಂದು ಕೊಂಡು ಹೀಗೆಲ್ಲಾ ಆಡುತ್ತಾನೆ ಎಂದೆಲ್ಲಾ ಹೇಳುತ್ತಿರುತ್ತಾನೆ. ಅದೆಲ್ಲಾ ಸುಳ್ಳು ಸಾರ್, ನನಗೆ ಆ ಹುಡುಗ ಚೆನ್ನಾಗಿ ಗೊತ್ತು. ಅವನು ಬಲು ಒಳ್ಳೆಯವನು. ಚೆನ್ನಾಗಿ ಕೆಲಸ ಮಾಡುತ್ತಾನೆ. ಪಾಪ...'

ಅಣ್ಣಾಚ್ಚಿಯ ಬಗ್ಗೆ ನಾನು ಚೆನ್ನಾಗಿ ತಿಳಿದಿದ್ದೆನಾದ್ದರಿಂದ ಅದನ್ನೆಲ್ಲಾ ನಂಬದಿರಲು